ಸಂಬಂಧವಿತ್ತಂತೆ. ಮಿಥಿಲಾಳಿಗೆ ಸಾಬು ಹೆದರುತ್ತಿದ್ದನಂತೆ. ಆತನ ಬಗ್ಗೆ ಏನೋ ರಹಸ್ಯ ಆಕೆಗೆ ಗೊತ್ತಿದ್ದಿರಬೇಕೆಂದು ಪ್ರೇಮಾಳ ಊಹೆ. ಕೊಲೆಯಾದ ದಿನ ವರ್ಗೀಸ್ ಆಕೆಯೊಡನೆ ಪಿಕ್ನಿಕ್ಕಿಗೆ ಹೋಗುವುದಾಗಿ ಹೇಳಿ ಹೋದವರು, ಮೂರೂವರೆಗೆ ತನಗೆ ಹುಶಾರಿಲ್ಲವೆಂದು ವಾಪಸು ಬಂದನೆಂದು ಆಕೆ ಹೇಳಿದಳು. ಸಾಕ್ಷಿಯಾಗಿ ಆ ದಿವಸದ ಹಾಜರಾತಿಯ ಪಂಚಿಂಗ್ ತೋರಿಸಿದಳು. ಸಾಬು ಕಚೇರಿಯಲ್ಲಿ ಇಲ್ಲದಿದ್ದುದರಿಂದ ಆತನನ್ನು ಭೇಟಿಯಾಗಲಾಗಲಿಲ್ಲ.

★★★

ಆ ರಾತ್ರಿ ಕರಮಚಂದ ಊಟವಾದ ಮೇಲೆ, ಪ್ರಶ್ನೆ ಹಾಕಿದ,

"ಮೇಲುನೋಟಕ್ಕೆ ಪ್ರಾಸಿಕ್ಯೂಶನ್ ವಾದ ಸರಿಯಾಗಿಯೇ ಇದೆಯಂತ ಅನ್ನಿಸುತ್ತದೆ. ಚೆಟ್ಟಿಯಪ್ಪನೇ ಕೊಲೆ ಮಾಡಿರುವ ಸಾಧ್ಯತೆ ಜಾಸ್ತಿ. ಆದರೆ, ಗೊಂದಲ ಮೂಡಿಸುವ ಅಂಶಗಳು. ಚೆಟ್ಟಿಯಪ್ಪ ಹಾಕಿದ ಸ್ಟೇಟಸ್‌ನ ಅರ್ಥವೇನು? ಚೆಟ್ಟಿಯಪ್ಪನ ಮನೆಗೆ ಆಗಮಿಸಿದ ಆಗಂತುಕನ ಉದ್ದೇಶವೇನು? ಮಿಥಿಲಾಳ ತಲೆಗೆ ಹೊಡೆಯಲು ಬಳಸಿದ ಇಟ್ಟಿಗೆ ಎಲ್ಲಿದೆ?"

"ಆ ಸ್ಟೇಟಸ್‌ನ ಉದ್ದೇಶ ಸ್ಪಷ್ಟ. ತನ್ನ ಹೆಂಡತಿಯ ಅನೈತಿಕ ಸಂಬಂಧ ಯಾವ ಗಂಡನಿಗೆ ಪ್ರಿಯ ಸತ್ಯವಾಗುತ್ತದೆ. ಆತ ಅದನ್ನು ಪೊಲೀಸರಲ್ಲೂ ಬಾಯಿ ಬಿಟ್ಟಿಲ್ಲ. ಅದನ್ನೇ ಆತ ಸ್ಟೇಟಸ್‌ನಲ್ಲಿ ಹಾಕಿದ್ದಾನೆ. ಆಗಂತುಕ ಬಂದ ಉದ್ದೇಶವಂತೂ ನಿಚ್ಚಳ. ಚೆಟ್ಟಿಯಪ್ಪನ ಸೂಚನೆಯ ಮೇರೆಗೆ ಆತ ಬಂದಿದ್ದಾನೆ. ಲ್ಯಾಪ್‌ಟಾಪ್‌ನಲ್ಲಿ ಪ್ರಾಯಶಃ ಮಿಥಿಲಾಳ ಅಕ್ರಮ ಸಂಬಂಧದ ಕುರಿತ ಸಾಕ್ಷ್ಯಗಳಿದ್ದಿರಬೇಕು. ಅದರಿಂದ ತನ್ನ ಮಾನ ಹೋಗುತ್ತದೆಂದು ಆತ ಭಾವಿಸಿರಬೇಕು."

"ಆದರೆ, ಲ್ಯಾಪ್‌ಟಾಪ್ ತೆಗೆದಿಡಲು ಈರಪ್ಪನಿಗೆ ಯಾಕೆ ಹೇಳಲಿಲ್ಲ?"

"ನಾವು ಈರಪ್ಪನನ್ನು ಪ್ರಶ್ನಿಸ್ತೀವಿ ಅಂತ ಚೆಟ್ಟಿಯಪ್ಪನಿಗೆ ಗೊತ್ತು. ಅದ್ಕೇ ಹೇಳಿಲ್ಲ. ಈರಪ್ಪನಲ್ಲಿ ಕೀ ಯಾಕೆ ಕೇಳಿದ್ದು?"

ಕರಮಚಂದ ಮೇಜಿನ ಸೆಳೆಖಾನೆಯಲ್ಲಿದ್ದ ಕೀಯೊಂದನ್ನು ತೋರಿಸಿದ.

"ಇದು ಡಿಸೋಜ ನೀಡಿದ್ದು. ಆದರೆ, ಈರಪ್ಪನ ತೋರಿಸಿದ್ದು ಬೇರೆಯೇ ಕೀ. ಅಂದರೆ, ಆಗಂತುಕನಿಗೆ ಕೀ ನೀಡಿದ್ದು ಈರಪ್ಪ!"

"ತಿಮ್ಮಯ್ಯನ ಹೇಳಿಕೆಯ ಅರ್ಥವೇನು?"

"ಪ್ರಾಯಶಃ ನಾವು ಹೀಗೆ ತರ್ಕಿಸಬಹುದು. ಮಿಥಿಲಾ ಜುಜುಬಿ ದರಕ್ಕೆ ತನ್ನ ಜಾಗವನ್ನು ಮಾರಲು ಹೊರಟಿದ್ದಾಳೆ. ಜೊತೆಗೆ, ಅನೈತಿಕ ಸಂಬಂಧ. ಇದಕ್ಕೆಲ್ಲಾ ಒಂದು ಅಂತ್ಯ ಕಾಣಿಸಬೇಕೆಂದು ನಿರ್ಧರಿಸಿದ್ದಾನೆ. ಬೆಂಕಿ ಅವಘಡದ ನಾಟಕ ಸೃಷ್ಟಿ ಮಾಡಿದ್ದಾನೆ. ಬಹುಶಃ ಪಾರಾಗುತ್ತಿದ್ದನೋ ಏನೋ. ಆದರೆ, ಅದು ಉಲ್ಟಾ ಹೊಡೆಯಿತು. ಇರಲಿ, ಆ ಇಟ್ಟಿಗೆ ಸಿಕ್ಕಿದರೆ ಈ ಪ್ರಕರಣಕ್ಕೆ ಮಂಗಳ ಹಾಡಬಹುದು."

ಹಾಗೆಂದು ಕರಮಚಂದ ಜೋರಾಗಿ ಆಕಳಿಸಿ, ನಿದ್ರೆಯ ಸೂಚನೆ ನೀಡಿದ.

★★★

ಮರುದಿನ ರಾತ್ರಿ ಹತ್ತರ ವೇಳೆಗೆ ಕಾಶಿ ಆಗಮಿಸಿದ್ದರು.

"ನಮ್ಮ ತನಿಖೆ ಬಹುತೇಕ ಮುಗಿದಂತೆ." ಹಾಗೆಂದು ಕರಮಚಂದ ಸಲ್ಲಿಸಿದ ವರದಿಯನ್ನು ಕೇಳಿ ಅವರ ಮೊಗ ಕಳೆಗುಂದಿತು.

"ಆದರೆ, ಚೆಟ್ಟಿಯಪ್ಪ ಕೊಂದ ಎಂದರೆ ನಂಬಲಾಗುತ್ತಿಲ್ಲ." ಕಾಶಿ ಉದ್ಗರಿಸಿದರು.

"ಕೊನೆಯ ಘಟ್ಟದಲ್ಲಿ, ಒಂದು ಸಣ್ಣ ತಿರುವು. ಮಿಥಿಲಾ ಕೊಲೆಯಾಗುವ ವೇಳೆಗೆ ಅಲ್ಲಿ ಇನ್ನೊಬ್ಬ ವ್ಯಕ್ತಿಯಿದ್ದ. ಯಾರು ಗೊತ್ತೇ? ಸಾಬು ವರ್ಗೀಸ್!"